# ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ , ಬೆಂಗಳೂರು

## ಭೂ ಒಡೆತನ ಯೋಜನೆಯಡಿ ಜಮೀನು ಖರೀದಿಸಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಭೂ ರಹಿತ ಅರಣ್ಯ ಅವಲಂಬಿತರಿಗೆ ಸೌಲಭ್ಯ ಕಲ್ಪಿಸುವ ಯೋಜನೆಯ ಬಗ್ಗೆ.

- ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮ ಇವರ ಅನುಷ್ಠಾನಗೊಳಿಸುತ್ತಿರುವ ಭೂ ಒಡೆತನ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನಾಂಗದವರ ಸಾಮಾಜಿಕ ಹಾಗೂ ಆರ್ಥಿಕ ಶ್ರೇಯೋಭಿವೃದ್ಧಿಯ ಹಿತದೃಷ್ಟಿಯಿಂದ ಖಾಸಗಿ ಜಮೀನನ್ನು ಖರೀದಿಸಿ, ಭೂ ರಹಿತ ಮಹಿಳೆಯರಿಗೆ ನೀಡಿ ಭೂ ಒಡೆಯರನ್ನಾಗಿ ಮಾಡಲಾಗುತ್ತದೆ. (ಸಕಇ 107 ಎಸ್.ಡಿ.ಸಿ 2016 ಬೆಂಗಳೂರು, ದಿನಾಂಕ:28.05.2016)



# ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ , ಬೆಂಗಳೂರು

- ರಾಜ್ಯದಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗಗಳ ಜನಾಂಗದ ಹಲವಾರು ಕುಟುಂಬಗಳು ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿದ್ದು, ಆರ್ಥಿಕವಾಗಿ ಹಿಂದುಳಿದಿದ್ದು, ಯಾವುದೇ ಸ್ವಂತ ಜಮೀನು ಹೊಂದದೆ ಭೂ ರಹಿತರಾಗಿದ್ದು, ಸ್ವಂತ ಜಮೀನಿಗಾಗಿ ಕಾನೂನಿನ ತೊಡಕುಗಳಲ್ಲಿ ಹೋರಾಟ ಮಾಡುತ್ತಿದ್ದು, ಇಂತಹ ಕುಟುಂಬಗಳನ್ನು ಗುರುತಿಸಿ ಇವರಿಗೆ ಭೂ ಒಡೆತನ ಯೋಜನೆಯಡಿ ಖಾಸಗಿಯವರಿಂದ ಜಮೀನನ್ನು ಖರೀದಿಸಿ ನೀಡಿ, ಅರಣ್ಯದಲ್ಲಿ ವಾಸಿಸುವ ಕುಟುಂಬಗಳನ್ನು ಮುಖ್ಯ ವಾಹಿನಿಗೆ ಕರೆ ತಂದು, ಸ್ವತಂತ್ರ ಜೀವನ ಮಾಡಲು ಉಪಯೋಗವಾಗುವ ದೃಷ್ಟಿಯಿಂದ ಕಾರ್ಯಕ್ರಮ ಹಮ್ಮಿಕೊಂಡಿದ್ದು ಇದರಿಂದ ಅರಣ್ಯ ಸಂರಕ್ಷಣೆ ಸಹ ಸಾಧ್ಯವಾಗುತ್ತದೆ.

# ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ , ಬೆಂಗಳೂರು

ಸದರಿ ಯೋಜನೆಯಡಿ ಘಟಕ ವೆಚ್ಚ ರೂ.15.00ಲಕ್ಷಗಳನ್ನು ನಿಗದಿ ಪಡಿಸಿದ್ದು, ಖರೀದಿಸುವ ಜಮೀನು ಸರ್ಕಾರದ ಮಾರ್ಗಸೂಚಿ ಬೆಲೆಯ ಮೇಲೆ ಜಿಲ್ಲಾಧಿಕಾರಿಗಳು 3 ಪಟ್ಟಿನವರೆಗೂ (ಘಟಕವೆಚ್ಚದ ಮಿತಿಗೆ ಒಳಪಟ್ಟು) ದರ ನಿಗದಿಪಡಿಸಬಹುದಾಗಿರುತ್ತದೆ ರೂ.15.00 ಲಕ್ಷ ಘಟಕವೆಚ್ಚದಲ್ಲಿ ಕನಿಷ್ಠ 2.00 ಎಕರೆ ಖುಷ್ಕಿ ಜಮೀನು, ಕನಿಷ್ಠ 1.00 ಎಕರೆ ತರಿ ಅಥವಾ ಭಾಗಾಯ್ತು ಜಮೀನನ್ನು ಖರೀದಿಸಲು ಅವಕಾಶವಿರುತ್ತದೆ.





# ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ , ಬೆಂಗಳೂರು

## ಅರ್ಹತೆಗಳು:

ಭೂ ರಹಿತ, ಅರಣ್ಯದಲ್ಲಿ ವಾಸಿರುತ್ತಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ಫಲಾಪೇಕ್ಷಿಗಳನ್ನು ಗುರುತಿಸಿ ಅವರಿಂದ್ ಈ ಕೆಳಕಂಡ ದಾಖಲಾತಿಗಳನ್ನು ಸಂಗ್ರಹಿಸುವುದು.

- ಕನಿಷ್ಠ 18 ರಿಂದ ಗರಿಷ್ಠ 50 ವರ್ಷದೊಳಗಿರುವ ವಯಸ್ಸಿನ ದೃಢೀಕರಣ ಪ್ರಮಾಣ ಪತ್ರ (ಆಧಾರ್ ಕಾರ್ಡ್ ಅಥವಾ ಬಿ.ಪಿ.ಎಲ್ ಕಾರ್ಡ್)
- ಜಾತಿ ಪತ್ರ, ಆದಾಯ ಪತ್ರ ಹಾಗೂ ತಹಶಿಲ್ದಾರ್ ಕಛೇರಿಯಿಂದ ಜಮೀನು ಇಲ್ಲದಿರುವ ಬಗ್ಗೆ ಕೃಷಿ ಕಾರ್ಮಿಕರ ಪ್ರಮಾಣ ಪತ್ರ.

ನಿಮ್ಮ ವ್ಯಾಪ್ತಿಯ ವಲಯದಲ್ಲಿ ಅರಣ್ಯ ಪ್ರದೇಶದಿಂದ ಹೊರಗಡೆ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದವರಲ್ಲದ ಜಮೀನು ಮಾರಾಟ ಮಾಡ ಬಯಸುವ ಭೂ ಮಾಲೀಕರನ್ನು ಗುರುತಿಸಿ ಅವರಿಂದ ಈ ಕೆಳಕಂಡ ದಾಖಲಾತಿಗಳನ್ನು ಪಡೆಯುವುದು.

- ಭೂ ಮಾಲೀಕರ ಒಪ್ಪಿಗೆ ಪತ್ರ, ನಮೂನೆ-01 ವರದಿ, ತಹಶೀಲ್ದಾರವರ ಕಛೇರಿಯಿಂದ, ಜಮೀನಿನ ಪಹಣಿ, ಜಮೀನಿಗೆ ಸಂಬಂಧಪಟ್ಟ ಗ್ರಾಮದ ಮಾರ್ಗಸೂಚಿಬೆಲೆಯ ಪಟ್ಟಿ.

# ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ , ಬೆಂಗಳೂರು

## ಅರ್ಹತೆಗಳು:

- ಭೂ ಮಾಲೀಕರ ಬ್ಯಾಂಕ್ ಬೇಬಾಕಿ ಪ್ರಮಾಣ ಪತ್ರ,
- ಕೃಷಿ ಇಲಾಖೆಯಿಂದ ಕೃಷಿ ಯೋಗ್ಯತೆ ಬಗ್ಗೆ ಪ್ರಮಾಣ ಪತ್ರ,
- ಭೂ ಮಾಲೀಕರ ಜಾತಿ ಪತ್ರ,
- ಕಬ್ಜಾ ನಕ್ಷೆ, ಈ.ಸಿ

ಸದರಿ ದಾಖಲೆಗಳೊನ್ನೊಳಗೊಂಡ ಪ್ರತಿ ಫಲಾನುಭವಿವಾರು ಅಥವಾ ಹಲವು ಫಲಾನುಭವಿಗಳನ್ನೊಳಗೊಂಡ ಭೂ ಮಾಲೀಕರ ಹಾಗೂ ಸದರಿ ಭೂಮಿ ಪಡೆಯಲಿಚ್ಚಿಸುವ ಫಲಾಪೇಕ್ಷಿಗಳ ಪ್ರಸ್ತಾವನೆಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರುರವರಿಗೆ ಸಲ್ಲಿಸಲು ತಿಳಿಸಲಾಗಿದೆ.

ಸದರಿ ವಿಷಯದ ಬಗ್ಗೆ ವಿಶೇಷ ಗಮನ ಹರಿಸಿ ಆದ್ಯತೆ ಮೇರೆಗೆ ಅರಣ್ಯ ಪ್ರದೇಶಗಳಲ್ಲಿ ವಾಸಿಸುತ್ತಿರುವ ಭೂ ರಹಿತ ಪರಿಶಿಷ್ಟ ಜಾತಿ/ಪಂಗಡ ಮಹಿಳಾ ಫಲಾಫೇಕ್ಷಿಗಳಿಗೆ ಭೂಮಿ ಖರೀದಿಸಿ ಅವರನ್ನು ಮುಖ್ಯ ವಾಹಿನಿಗೆ ತರಲು ಕ್ರಮ ಕೈಗೊಳ್ಳಲು ಸೂಚಿಸಿದೆ.

# ಧನ್ಯವಾದಗಳು

